ಕವಿಯಾಗಿ ಜೈನ ತತ್ತ್ವಗಳ ಅಪಾರ ಜ್ಞಾನವಿದ್ದಂತೆ, ಯತಿಯಾಗಿ, ಭಗವತ್ ಜಿನಸೇನಾಚಾರ್ಯರಿಗೆ ಆ ಸ್ಥಿತಿಯ ಸ್ಪಷ್ಟ ಗೋಚರ ಜ್ಞಾನ ವಿದ್ದುದರಿಂದ ಅವರು ಪರಿಪಕ್ವ ಮನದ ಮಾಗಿದ ಫಲವಾಗಿ, ತಮ್ಮ ಉಜ್ವಲವಾದ ಕೃತಿಗಳನ್ನು ಲೋಕಾರ್ಪಣೆ ಮಾಡಿದ್ದಾರೆ ಎನ್ನಬಹುದು.

ಮುಕ್ತಿನಲ್ಲಿ ಅವರಿಂದ ರಚಿತವಾದ ಈ ಪೂರ್ವಪುರಾಣದ ಕಥಾವಸ್ತುವು ಆದಿ ತೀರ್ಥಂಕರ (ಜನ್ಮಾಂತರಗಳಲ್ಲಿ ಜೀವ ಮಾಗಿ ಭದ್ರ ನೆಲೆಗೆ ತಲುಪಿದ ಸ್ಥಿತ್ಯಂತರ ನಿರೂಪಣೆ), ಆದಿ ಚಕ್ರೇಶ್ವರ (ಆಡಳಿತ ಸ್ವರೂಪದ ನೇರ ಮತ್ತು ಯಥಾರ್ಥ ನಿರೂಪಣೆ) – ಇವು ಗಳನ್ನು ಆಧರಿಸಿದ್ದು ಅತ್ಯಂತ ಮಹತ್ವಪೂರ್ಣವಾಗಿ, ಜಿನಾಗಮ, ಲೌಕಿಕ ಎರಡನ್ನೂ ಬೆಳಗಿಸಿದ ಕೀರ್ತಿಗೆ ಶ್ರೀಜಿನಸೇನಾಚಾರ್ಯರು ಪಾತ್ರರಾಗಿದ್ದಾರೆ. ಇಂತಹ ಯತಿಶ್ರೇಷ್ಠರನ್ನು ಪಡೆದ ಕನ್ನಡ ಜನತೆ ಧನ್ಯವಾಗಿದೆ.

---

**ದಿವ್ಯಸ್ಮೃತಿಪ್ರಭ**

**ಸಾವನ್ನು ಸ್ವಾಗತಿಸಿದ ಸಂನ್ಯಾಸಿಗಳು:** ಸ್ವಾಮಿ ಆದ್ಯಾನಂದರು ರಾಮಕೃಷ್ಣ ಮಹಾಸಂಘದ ಚಂಡೀಘರ್ ಕೇಂದ್ರದ ಅಧ್ಯಕ್ಷರಾಗಿದ್ದರು. ಅವರು ತಮ್ಮ ಹಾಸ್ಯಪ್ರವೃತ್ತಿಗೆ ಹೆಸರಾಗಿದ್ದರು. ಯಾವಾಗಲೂ ಹಾಸ್ಯ ಮಾಡುತ್ತ, ಎಲ್ಲರನ್ನೂ ನಗಿಸು ತ್ತಿದ್ದರು. ಪ್ರತಿನಿತ್ಯ ರಾತ್ರಿ ಊಟವಾದ ಮೇಲೆ ಸಂನ್ಯಾಸಿ ಬ್ರಹ್ಮಚಾರಿ ಗಳೆಲ್ಲರೂ ಸೇರಿ ಯಾವುದಾದರೂ ಪುಸ್ತಕವನ್ನು ಓದುವುದು ನಮ್ಮ ಎಲ್ಲಾ ಆಶ್ರಮಗಳಲ್ಲಿರುವ ಪದ್ಧತಿ. ಒಂದು ದಿನ ರಾತ್ರಿಯ ತರಗತಿಯಲ್ಲಿ ಸ್ವಾಮಿ ಆದ್ಯಾನಂದರು ಎಲ್ಲರನ್ನೂ ಉದ್ದೇಶಿಸಿ ಹೇಳಿದರು: "ಇಂದು ರಾತ್ರಿ ನಾನು ಪ್ರಾಣ ಬಿಡುತ್ತೇನೆ." ಆಗ ಅವರ ಆರೋಗ್ಯ ಚೆನ್ನಾಗಿಯೇ ಇತ್ತು. ಆದುದರಿಂದ ಅವರ ಸುತ್ತ ಕುಳಿತಿದ್ದ ಸಾಧುಬ್ರಹ್ಮಚಾರಿಗಳು ಅದನ್ನೂ ಒಂದು ಹಾಸ್ಯದ ಮಾತಿರಬೇಕೇನೋ ಎಂದು ಭಾವಿಸಿದರು. ಆದರೆ ರಾತ್ರಿ ಮಲಗಿಕೊಂಡವರು ಮಾರನೆಯ ದಿನ ಬೆಳಗ್ಗೆ ಏಳಲೇ ಇಲ್ಲ. ರಾತ್ರಿ ನಿದ್ರೆಯಲ್ಲಿಯೇ ಅವರ ಪ್ರಾಣ ಹೊರಟು ಹೋಗಿತ್ತು.

**ಸ್ವಾಮಿ ಶಾರದಾನಂದರ ಸೇವಾಮನೋಭಾವ:** ಒಂದು ದಿನ ಮಧ್ಯಾಹ್ನದ ವಿಶ್ರಾಂತಿಯ ಸಮಯ. ಒಬ್ಬ ಸಂನ್ಯಾಸಿ ಸ್ವಾಮಿ ಶಾರದಾನಂದರು ಎಲ್ಲಿಗೋ ಹೊರಟಿರುವುದನ್ನು ನೋಡಿದರು. ವಿಚಾರಿಸಿದಾಗ, "ಸ್ವಲ್ಪ ಕೆಲಸವಿದೆ" ಎಂದರು. ಸಂನ್ಯಾಸಿಗೆ ಕುತೂಹಲ. ಸ್ವಾಮಿ ಶಾರದಾನಂದರನ್ನೇ ಹಿಂಬಾಲಿಸಿದರು. ಸ್ವಾಮೀಜಿ ನಡೆದುಕೊಂಡು ಒಂದು ಕೊಳಚೆಗೇರಿಗೆ ಹೋದರು. ಅಲ್ಲಿನ ಒಂದು ಮನೆಯನ್ನು ಹೊಕ್ಕರು. ಹಿಂಬಾಲಿಸುತ್ತಿದ್ದ ಸಂನ್ಯಾಸಿಯೂ ಇಣುಕಿ ನೋಡಿದರು. ಅಲ್ಲಿದ್ದ ಒಂದು ಚಿಕ್ಕ ಕೋಣೆಯಲ್ಲಿ ಅಸ್ಥಿಪಂಜರದಂತೆ ಇದ್ದ ವ್ಯಕ್ತಿಯೊಬ್ಬನು ಕೆಮ್ಮುತ್ತ ಮಲಗಿದ್ದನು. ಸ್ವಾಮೀಜಿ ನೇರ ಹೋದವರೇ ಅವನ ಎದೆಯ ಮೇಲೆ ಕೈಯಿರಿಸಿದರು. "ಹೇಗಿದ್ದೀಯಾ?" ಎಂದು ಕಳಕಳಿಯಿಂದ ಕೇಳಿದರು. ಆ ವ್ಯಕ್ತಿಯೂ ಕೆಮ್ಮುತ್ತಲೇ, "ಹೇಗೆ ತಾನೇ ಚೆನ್ನಾಗಿರಲಿ?" ಎಂದು ಉತ್ತರಿಸಿದನು. ಆಗ ತುಂಬು ಸ್ನೇಹದಿಂದ ಸ್ವಾಮಿ ಶಾರದಾ ನಂದರು ಹೇಳಿದರು: " ಆದರೆ, ಮೊದಲಿಗಿಂತ ನೀನು ಚೆನ್ನಾಗಿರುವಂತೆ ಕಾಣುತ್ತಿದೆಯಲ್ಲಾ. ಔಷಧಿಯನ್ನು ಸರಿಯಾಗಿ ತೆಗೆದುಕೊಳ್ಳುತ್ತಿರುವೆ ತಾನೆ? ಹಣ್ಣುಗಳು ಮುಗಿದುಹೋಗಿವೆಯೆಂದು ತೋರುತ್ತದೆ." ಅವನೆಂದನು: "ಔಷಧಿ ಕುಡಿಯುತ್ತಿದ್ದೇನೆ. ಹಣ್ಣು ತಿನ್ನುತ್ತಿದ್ದೇನೆ. ಇಷ್ಟಾದರೂ ಈ ರೋಗದಿಂದ ಪಾರಾಗಿ ಉಳಿಯುವುದಿಲ್ಲವೆಂದು ನನಗೆ ಗೊತ್ತು." ಅದಕ್ಕೆ ಶಾರದಾನಂದರು ಹೀಗೆ ಹೇಳಿದರು: "ಯಾರು ನಿನಗೆ ಹಾಗೆ ಹೇಳಿದರು? ನೀನು ಸಂಪೂರ್ಣ ಗುಣಮುಖನಾಗುವೆ. ಈ ಔಷಧಿ ಮತ್ತು ಹಣ್ಣುಗಳನ್ನು ಇಲ್ಲೇ ಇಟ್ಟು ಹೋಗುತ್ತಿದ್ದೇನೆ. ಸರಿಯಾಗಿ ತೆಗೆದುಕೋ." ಅವರ ಮಾತುಗಳನ್ನು ಕೇಳಿ ಅಳುತ್ತ ಅಳುತ್ತ ಅವನು ಹೇಳಿದನು: "ಮಹಾರಾಜ್, ನೀವು ಮನುಷ್ಯರಲ್ಲ. ನೀವು ಒಬ್ಬ ದೇವತೆ. ಈ ರೋಗಕ್ಕೆ ಹೆದರಿಕೊಂಡು ನನ್ನ ಸಂಬಂಧಿಕ ರೆಲ್ಲರೂ ನನ್ನನ್ನು ಬಿಟ್ಟು ಹೊರಟುಹೋಗಿದ್ದಾರೆ. ನೀವು ಇಷ್ಟೊಂದು ಧೈರ್ಯವಾಗಿ ನನ್ನ ಹತ್ತಿರ ಬಂದು ಕುಳಿತುಕೊಳ್ಳುತ್ತೀರಿ. ಅದಲ್ಲದೆ ನನ್ನ ಔಷಧಿ ಮತ್ತು ಆಹಾರದ ವ್ಯವಸ್ಥೆಯನ್ನು ಮಾಡಿದ್ದೀರಿ."

ಹೊರಗಡೆ ಕಿಟಕಿಯಿಂದ ಇದನ್ನು ನೋಡುತ್ತಿದ್ದ ಆ ಯುವ ಸಂನ್ಯಾಸಿಗೆ ಇನ್ನು ಅಲ್ಲಿರಲಾಗಲಿಲ್ಲ. ಅವರು ಮನೆಯೊಳಗೆ ಹೋಗಿ ಸ್ವಾಮಿ ಶಾರದಾನಂದರ ಕಾಲಿಗೆ ಎರಗಿದರು. ಅಳುತ್ತ ಹೇಳಿದರು: "ಮಹಾರಾಜ್, ನಾನು ಮಹಾಪರಾಧಿ. ನಿಮ್ಮ ಮೇಲೆ ನಾನು ಸಂಶಯ ಪಟ್ಟೆ. ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ." ಅವರನ್ನು ಕಂಡು ಶಾರದಾ ನಂದರಿಗೆ ಆಶ್ಚರ್ಯ. ಆದರೂ ಶಾಂತರಾಗಿ ಅವರು ಹೇಳಿದರು: " ಸಂಶಯವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆಯೇ ನಿಜಸಂಗತಿಯನ್ನು ತಿಳಿದುಕೊಂಡು ಒಳ್ಳೆಯದನ್ನೇ ಮಾಡಿದೆ. ಈ ರೀತಿಯೇ ಇರಬೇಕು."

---

**ಚಿಂತನ ಪ್ರಭ**

**ಸುಖದ ರಹಸ್ಯ**

ಮನುಷ್ಯ ಸುಖಾನ್ವೇಷಿ. ಸುಖವಾಗಿರಬೇಕೆಂಬುದೇ ಪ್ರತಿಯೊಬ್ಬನ ಅಪೇಕ್ಷೆ. ಆದರೆ ಸುಖದ ನೆಲೆ ಯಾವುದೆಂಬುದು ಮಾತ್ರ ಯಾರಿಗೂ ಗೊತ್ತಿಲ್ಲ. ಸುಖವನ್ನು ಯಾರೂ ನಮಗೆ ಕೊಡುವುದಿಲ್ಲ. ಅದು ನಾವೇ ಪಡೆದುಕೊಳ್ಳಬೇಕಾದ ಒಂದು ಸ್ಥಿತಿ. ಸುಖ ಯಾವುದರಿಂದ ಬರುತ್ತದೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಎಲ್ಲರಿಗೂ ಅವರವರದೇ ಆದ ಸುಖದ ಕಲ್ಪನೆಗಳಿರುತ್ತವೆ. ಆದ್ದರಿಂದ ಸುಖದ ಸಾರ್ವತ್ರೀಕರಣ ಸಾಧ್ಯವಾಗುವುದಿಲ್ಲ. ಒರಿಸ್ಸಾದ ಕವಿಮಿತ್ರರೊಬ್ಬರು ಒಂದು ಪ್ರಸಂಗ ಹೇಳಿದರು. ಅವರು ಒಬ್ಬ ಮಾನವಶಾಸ್ತ್ರಜ್ಞರನ್ನು ಆದಿವಾಸಿಗಳ ನೆಲೆಯೊಂದಕ್ಕೆ ಕರೆದುಕೊಂಡು ಹೋಗಬೇಕಾಯಿತಂತೆ. ಹಾಗೆ ಹೋದಾಗ ಬೆಳಗಿನ ಹತ್ತು ಹನ್ನೊಂದು ಘಂಟೆ ಸಮಯ. ಆದಿವಾಸಿ ಹುಡುಗರು ದೊಡ್ಡ ಮರದ ನೆರಳಿನಲ್ಲಿ ಮಲಗಿ ನಿದ್ರಿಸತೊಡಗಿದ್ದರು. ಮಾನವಶಾಸ್ತ್ರಜ್ಞರಿಗೆ ತುಂಬ ಅಚ್ಚರಿಯಾಯಿತು. ದುಡಿಯಬೇಕಾದ ಬೆಳಗಿನ ಈ ಹೊತ್ತಿನಲ್ಲಿ ಆ ತರುಣರು ನಿದ್ರಿಸುತ್ತಿದ್ದುದು ಅವರಿಗೆ ಸರಿಕಾಣಲಿಲ್ಲ. "ನೀವೇಕೆ ಈ ವೇಳೆಯಲ್ಲಿ ಕೆಲಸ ಮಾಡಬಾರದು?" ಎಂದು ಕೇಳಿದರು. ಒಬ್ಬ ತರುಣ "ಯಾಕೆ?" ಎಂದ. "ಹೆಚ್ಚಿಗೆ ದುಡಿಯಲು" ಎಂದರು ಆ ವಿದ್ವಾಂಸರು. "ದುಡಿದು ಏನು ಮಾಡುವುದು?" ಎಂದು ಅವನು ಕೇಳಿದ. ಮಾನವಶಾಸ್ತ್ರಜ್ಞರು ಆ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಅವರು ಅರ್ಥಶಾಸ್ತ್ರದ ಒಂದು ಉಪನ್ಯಾಸ ವನ್ನೇ ಕೊಟ್ಟರು. ಕಷ್ಟ ಪಡಬೇಕು, ಹೆಚ್ಚು ದುಡಿಯಬೇಕು, ಸಂಪತ್ತನ್ನು ಗಳಿಸಬೇಕು, ಮುಂದೆ ವಿಶ್ರಾಂತಿ ತೆಗೆದುಕೊಳ್ಳಬೇಕು. ಸಂಪತ್ತನ್ನು ಬಳಸಬೇಕು, ಸುಖ ಪಡಬೇಕು– ಇದು ಅವರ ಉಪನ್ಯಾಸದ ಸಾರಾಂಶ. ಇವೆಲ್ಲವೂ ಆ ಆದಿವಾಸಿ ತರುಣರಿಗೆ ದೊಡ್ಡ ಗೋಜಲಿನಂತೆ ಕಾಣಿಸಿತು; ಅವರಿಗೆ ಇದೆಲ್ಲ ಅರ್ಥಹೀನ ವಾದದಂತೆ ತೋರಿತು. ಆ ತರುಣ, ದುಭಾಷಿಯಾಗಿದ್ದ ನಮ್ಮ ಕವಿಮಿತ್ರರಿಗೆ ಹೇಳಿದನಂತೆ, "ನೋಡಿ, ನೀವು ಈ ಬಾಬೂಗೆ ಹೇಳಿ. ಇವರು ನಮಗೆ ಏನು ಮಾಡಿ ಎಂದು ಹೇಳುತ್ತಿದ್ದಾರೆಯೋ ನಾವು ಈಗ ಅದನ್ನೇ ಮಾಡುತ್ತಿದ್ದೇವೆ. ಎಲ್ಲ ದುಡಿಮೆಯೂ ಸುಖಕ್ಕೆ ತಾನೇ? ನಾವು ನೆನ್ನೆ ದುಡಿದಿದ್ದೇವೆ. ಇವತ್ತು ಸುಖ ಪಡುತ್ತಿದ್ದೇವೆ. ಈ ಸುಖ ಪಡಲು ನಾಳೆಗಾಗಿ ನಾವು ಏಕೆ ಕಾಯಬೇಕು? ನಮಗೆ ಬೇಕಾದ ಸುಖ ಈಗಲೇ ಇದೆ." ಇದೇ ಸುಖದ ರಹಸ್ಯ – ಆ ಆದಿವಾಸಿ ತರುಣನಂತೆ ತಮ್ಮಲ್ಲೇ ಇರುವ ಈ ರಹಸ್ಯವನ್ನು ಕಂಡುಕೊಂಡವರು ವಿರಳ.

– ಡಾ. ಹಾ.ಮಾ.ನಾಯಕ (ಆಧಾರ: ಸಂಗಾತಿ)